


**ಮಕ್ಕಳ ಒರಟುತನಕ್ಕೆ ಕಾರಣ**

ಸಿ.ಆರ್.ಚಂದ್ರಶೇಖರ್ ಅವರ 'ಮಕ್ಕಳೇಕೆ ಮಾತು ಕೇಳುವುದಿಲ್ಲ' ಬರಹಕ್ಕೆ ಸೇರಿಸಬೇಕಾದ ಮತ್ತೊಂದು ವಿಷಯ ಏನೆಂದರೆ; ಮಕ್ಕಳ ಶೂ ಹಾಕುವ, ಕುಳಿತಲ್ಲೇ ತಿನಿಸಿ ಕೈತೊಳೆಯುವಲ್ಲಿ ಸಾರ್ಥಕ್ಯ ಕಾಣುವ ತಾಯಂದಿರು ಮಕ್ಕಳ ಒರಟುತನಕ್ಕೆ ಕಾರಣವಾಗುತ್ತಾರೆ.

ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

**ಪ್ರತೀಕಾರ!**

ನಮ್ಮ ಮನೆಯ ಮಕ್ಕಳು ಹಿರಿಯರ ಮಾತನ್ನು ಕೇಳುವುದೇ ಇಲ್ಲ! ಏಕೆಂದರೆ, ನಾವೂ ಸಹ ನಮ್ಮ ಹಿರಿಯರ ಮಾತನ್ನು ಕೇಳುತ್ತಿರಲಿಲ್ಲ!

-ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

**ಅಚ್ಚರಿ, ಸಂತಸ**

ವಂಡರ್ ಪುಟದಲ್ಲಿ 'ಅಬ್ಬಾ ಈರುಳ್ಳಿ!' ಆಶ್ಚರ್ಯದೊಂದಿಗೆ ಸಂತಸ ತಂದಿತು.

-ರವೀಂದ್ರನಾಥ ಯಡಹಳ್ಳಿ, ಬೀಳಗಿ

**ಹೌದಾ... ಸಾಯ್ತಾರಾ?**

ಎಸ್.ಜಿ. ಶಿವಶಂಕರ್‌ರ 'ಟೀವಿ ನೋಡಿದರೆ: ಬೇಗ ಸಾಯ್ತಾರಾ?' ಲೇಖನ ಓದಿ ನಿಜಕ್ಕೂ ಆಶ್ಚರ್ಯವಾಯ್ತು!

-ಎಂ.ಎಲ್. ಲಕ್ಷ್ಮಣ್‌ರಾವ್, ದಾವಣಗೆರೆ

**ಬ್ಯಾರಿ ಆಭರಣ ಪರಿಚಯ**

ಹಂಝ ಮಲಾರ್ ಬ್ಯಾರಿ ಜನರ ಆಭರಣಗಳನ್ನು ಚಿತ್ರಸಹಿತ ವಿವರವಾಗಿ ಪರಿಚಯಿಸಿಕೊಟ್ಟಿದ್ದಾರೆ.

ವೈ.ಎಂ.ಚಂದ್ರಶೇಖರ್, ಸಿದ್ದಾಪುರ

**ಸಂಶಯ ನಿವಾರಿಸಿ**

'ಟಿ.ವಿ. ನೋಡಿದರೆ ಬೇಗ ಸಾಯ್ತಾರಾ?' ಓದಿದ ಮೇಲೆ ವ್ಯಾಯಾಮವನ್ನು ನಿಯಮಿತವಾಗಿ ಮಾಡಿ, ದಿನಕ್ಕೆ 2-3 ಗಂಟೆ ಟಿ.ವಿ ನೋಡುವ ನನ್ನಂತಹ ಹಿರಿಯ ನಾಗರಿಕರಿಗೆ ಏನೋ ಒಂಥರಾ ಹೆದರಿಕೆ ಶುರುವಾಗಿದೆ. ಸಂಶಯ ನಿವಾರಿಸಿ.

'ಮಯೂರ ಕಾಳಗ' ಚಿತ್ರಬರಹ ನೋಡಿ ಇಂಗ್ಲಿಷಿನ 'ಮಾರ್ವೆಲಸ್' ಎಂಬ ಉದ್ಗಾರ ಬರ್‍ತಾ ಇದೆ.

-ಬಳ್ಳಾರಿ ಮಧ್ವರಾಜ್, ಬೆಂಗಳೂರು

**ಬೋಧಪ್ರದ ಲಹರಿ**

'ಸ್ವಾಧ್ಯಾಯ ಮತ್ತು ಪ್ರವಚನ' ಕುರಿತ ವೈನತೇಯರ ವಿಚಾರ ಲಹರಿ ಬೋಧಪ್ರದವಾಗಿದೆ.

-ಮ. ಪ್ರಿಯ, ಮೈಸೂರು/ ಡಿ.ಎಲ್.ನಾಗರಾಜ್, ಚನ್ನಗಿರಿ

**ಸರಳ, ಸುಂದರ ಪರಿಚಯ**

'ಹೊರಗೆ ಗಂಭೀರ, ಒಳಗೆ ವಿನೋದ' ಗುಡಿಹಳ್ಳಿ ನಾಗರಾಜರ ಬರಹ ಜಿ.ನಾರಾಯಣ ಅವರ ವ್ಯಕ್ತಿತ್ವ ಎಷ್ಟು ಮಹತ್ವದ್ದಾಗಿತ್ತು ಎಂಬುದನ್ನು ಸರಳವಾಗಿ, ಸುಂದರವಾಗಿ ಪರಿಚಯಿಸಿಕೊಟ್ಟಿತು.

ಸು.ವಿಜಯಲಕ್ಷ್ಮಿ, ಶಿವಮೊಗ್ಗ/ಮ.ಗೋ.ಸುಬ್ಬಣ್ಣ, ಮೇಗರವಳ್ಳಿ/ ಅ.ನ.ರಾವ್, ಬೆಂಗಳೂರು/ ಇಂದುಮತಿ ಲಮಾಣಿ, ವಿಜಾಪುರ/ ಎಸ್.ಚನ್ನಪ್ಪ, ಮೈಸೂರು/ ಎಚ್.ಆನಂದಕುಮಾರ್, ಚಿತ್ರದುರ್ಗ

**ಮೆಚ್ಚುಗೆ**

ಎಚ್.ಎಸ್. ಶ್ರೀಮತಿಯವರ 'ಗುಲ್ಮಾರ್ಗಿನಲ್ಲಿ ಗೊಂಡೋಲ' ಲೇಖನ ಮೆಚ್ಚುಗೆಯಾಯಿತು.

-ಅಬ್ದುಲ್ ವಹ್ವಾಬ್ ಮುಲ್ಲಾ, ಗಂಗಾವತಿ

**ಬೆರಗು ತಂದ ಮಯೂರ ಕಾಳಗ**

ಎಚ್.ಚಂದ್ರಶೇಖರ್ ಅವರ 'ಮಯೂರ ಕಾಳಗ'ದ ಚಿತ್ರ-ಬರಹ ಬೆರಗು ಮೂಡಿಸಿತು.

'ತರಂಗಿಣಿ', ತುಮಕೂರು/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

**ಸಹಜ, ಸುಂದರ ಕಥೆ**

ಭ್ರೂಣ ಹತ್ಯೆಯ ವಿವಿಧ ಆಯಾಮಗಳನ್ನು ಚಿತ್ರಿಸಿದ ಪಾರ್ವತಿ ಪಿಟಗಿಯವರ 'ಅಜ್ಞಾತವಾಸ' ಕಥೆ ಸಹಜ ಸುಂದರ ಆಡುಭಾಷೆಯಿಂದ ಓದಿಸಿಕೊಂಡು ಹೋಯಿತು.

ಕೊಹಿಮ, ಬಸರಕೋಡು/ ಬಿ.ಎಸ್.ಮುಳ್ಳೂರ, ಹಲಗತ್ತಿ

ಬೆಲೆ ರೂ. 16 ಮಾತ್ರ

ವರ್ಷದ ಸಮಗ್ರ ಮಾರ್ಗದರ್ಶಿ

2012

ದಿನದರ್ಶಿಕೆ ಮಾರುಕಟ್ಟೆಯಲ್ಲಿ ಲಭ್ಯ




ಪ್ರತಿಗಳಿಗಾಗಿ ನಿಮ್ಮ ನ್ಯೂಸ್ ಏಜೆಂಟರು, ಪುಸ್ತಕದ ಅಂಗಡಿಗಳು ಅಥವಾ ನಮ್ಮ ಕಚೇರಿಗಳು:

ದಿ ಪ್ರಿಂಟರ್ಸ್(ಮೈಸೂರ್) ಪ್ರೈ. ಲಿ., 75, ಎಂ.ಜಿ. ರಸ್ತೆ, ಬೆಂಗಳೂರು-560 001.
ದೂರವಾಣಿ: 25880200/202/216/226/227.
ಬಸವನಗುಡಿ ಕಚೇರಿ: 25880208. ನಗರ ಕಚೇರಿ: ಕೆ.ಜಿ. ರಸ್ತೆ: 25880209. ರಾಜಾಜಿ ನಗರ: 25880210. ಜೆ.ಸಿ. ರಸ್ತೆ: 25880218. ಗಂಗಾನಗರ: 25880227. ಬಿ.ಟಿ.ಎಂ.: 25880229. ತಿಪ್ಪಸಂದ್ರ: 25880213. ಮೈಸೂರು: 2420532/2420129. ಹುಬ್ಬಳ್ಳಿ: 2372709/2372081. ಮಂಗಳೂರು: 2215852/2218334. ಗುಲ್ಬರ್ಗ: 255539/221808 ಸಂಪರ್ಕಿಸಿ.